**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ರಮೇಶ್ ಬಾಬು ರವರು ಪ್ರಸ್ತಾಪಿಸಿರುವ ನಿಯಮ- 72ರ ಗಮನ ಸೆಳೆಯುವ ಸೂಚನೆಗೆ ಉತ್ತರ**

**ವಿಷಯ:** ಬೆಂಗಳೂರಿನಲ್ಲಿ ಹಲವಾರು ಖಾಸಗಿ ಸಂಸ್ಥೆಗಳು ರಿಯಲ್ ಎಸ್ಟೇಟ್ ಹೆಸರಿನಲ್ಲಿ ಜನಸಾಮಾನ್ಯರಿಗೆ ಮೋಸ ಮಾಡುತ್ತಿರುವುದು ನಿರಂತರವಾಗಿ ನಡೆಯುತ್ತಿದೆ. ಬೆಂಗಳೂರಿನ ಹೆಚ್.ಎಸ್.ಆರ್ ಲೇಔಟ್ ನಲ್ಲಿ ಒಂದನೇ ಸೆಕ್ಟರ್ ವಂಗನಹಳ್ಳಿ, 24ನೇ ಮುಖ್ಯರಸ್ತೆಯಲ್ಲಿ ಇರುವ ಅರ್ಬನ್ ಸ್ಟ್ಯಾಂಡ್ (URBAN STANDZ) ಎನ್ನುವ ಒಂದು ಖಾಸಗಿ ರಿಯಲ್ ಎಸ್ಟೇಟ್ ಸಂಸ್ಥೆಯು ಬೆಂಗಳೂರಿನ ಹಲವಾರು ಜನರಿಗೆ ರಿಯಲ್ ಎಸ್ಟೇಟ್ ಹೆಸರಿನಲ್ಲಿ ಮೋಸ ವಂಚನೆ ಮಾಡುತ್ತಿದೆ. ಬೆಂಗಳೂರಿನ ಯಾವುದೇ ಸ್ಥಳೀಯ ಸಂಸ್ಥೆ ಅಥವಾ ಸರ್ಕಾರಿ ಸಂಸ್ಥೆಗಳ ಮೂಲಕ ಪರವಾನಿಗೆಯಾಗಲಿ ಅಥವಾ ಅನುಮತಿಯಾಗಲಿ ಹೊಂದದೆ ಇರುವ ಈ ಸಂಸ್ಥೆಯು, ಬೆಂಗಳೂರಿನಲ್ಲಿ ಬಾಡಿಗೆ ಮನೆ, ಪ್ರಾಪರ್ಟಿ ಸೊಲ್ಯೂಷನ್ ಕೊಡಿಸುವುದಾಗಿ, ಲೀಸ್ ಪ್ರಾಪರ್ಟಿ ಕೊಡಿಸುವುದಾಗಿ, ನಿವೇಶನಗಳನ್ನು ಕೊಡಿಸುವುದಾಗಿ ಗ್ರಾಹಕರಿಂದ ಹಣ ಸುಲಿಗೆ ಮಾಡಿ ಮೋಸ ಮಾಡುತ್ತಿದೆ. ಅದೇ ರೀತಿ ಸ್ವತ್ತಿನ /ಮನೆ ಮಾಲೀಕರಿಂದ ತಾವು ಗ್ರಾಹಕರನ್ನು ಒದಗಿಸುವುದಾಗಿ ಹೇಳಿ ಅವರೊಂದಿಗೆ ಒಪ್ಪಂದ ಮಾಡಿಕೊಂಡು ಒಪ್ಪಂದಗಳ ನಿಯಮಗಳ ವಿರುದ್ಧವಾಗಿ ಖಾಸಗಿಯವರಿಗೆ ಅಥವಾ ಮೂರನೇ ವ್ಯಕ್ತಿಗಳಿಗೆ ಸ್ವತ್ತುಗಳನ್ನು ಕಾನೂನುಬಾಹಿರವಾಗಿ ಲೀಸ್ ಮಾಡಿ ವಂಚನೆ ಮಾಡುತ್ತಿದೆ. ಸದರಿ ಕಂಪನಿಯು ಹಲವಾರು ವಂಚನೆಗಳನ್ನು ಬೆಂಗಳೂರಿನಲ್ಲಿ ನಡೆಸುತ್ತಿದ್ದು, ಬೆಂಗಳೂರಿನ ಎಲ್ಲ ಭಾಗಗಳಲ್ಲಿ ಈ ರೀತಿ ಮನೆ ಮಾಲೀಕರಿಗೆ ಗ್ರಾಹಕರಿಗೆ ವಂಚನೆ ಮಾಡಿರುತ್ತದೆ. ಸದರಿ ಸಂಸ್ಥೆಯ ವಿರುದ್ಧ ಕೂಡಲೇ ಕ್ರಮವನ್ನು ಕೈಗೊಂಡು ಈ ಕಂಪನಿಯ ಮೋಸ ಮತ್ತು ವಂಚನೆಗಳನ್ನು ತಡೆಯಲು ಸರ್ಕಾರ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಬೆಂಗಳೂರಿನ ಸಿಂಗಸಂದ್ರದಲ್ಲಿ ಇದೇ ರೀತಿ ಅನೇಕರಿಗೆ, ಮನೆ ಮಾಲೀಕರಿಗೆ ಮತ್ತು ಬಾಡಿಗೆದಾರರಿಗೆ ಸುಳ್ಳು ಕರಾರು ಪತ್ರಗಳನ್ನು ಸೃಷ್ಟಿ ಮಾಡಿ ಈ ಸಂಸ್ಥೆಯು ಕೋಟ್ಯಂತರ ರೂಪಾಯಿ ವಂಚನೆ ಮಾಡಿರುತ್ತದೆ. ಆದುದರಿಂದ ರಾಜ್ಯ ಸರ್ಕಾರ, ಗೃಹ ಸಚಿವರು ಕೂಡಲೇ ಈ ಸಂಸ್ಥೆಯ ವಿರುದ್ಧ ಕ್ರಮ ಕೈಗೊಂಡು ಬೆಂಗಳೂರಿನಲ್ಲಿ ಆಗುತ್ತಿರುವ ರಿಯಲ್ ಎಸ್ಟೇಟ್ ಮೋಸ ಮತ್ತು ವಂಚನೆ ತಡೆಯಲು ಕ್ರಮ ಕೈಗೊಳ್ಳುವ ಕುರಿತು.

**ಉತ್ತರ:** ಆಗ್ನೇಯ ವಿಭಾಗದ ಪಿ.ಐ, ಹೆಚ್.ಎಸ್.ಆರ್. ಲೇಔಟ್ ಪೊಲೀಸ್ ಠಾಣೆ ರವರು ಸದರಿ ಕಂಪನಿ ವಿರುದ್ಧ ಎರಡು ದೂರು ಅರ್ಜಿಗಳನ್ನು ಸ್ವೀಕರಿಸಿದ್ದು, ಸದರಿ ದೂರು ಅರ್ಜಿಯ ಮೇರೆಗೆ ಹೆಚ್.ಎಸ್.ಆರ್. ಲೇಔಟ್ ಪೊಲೀಸ್ ಠಾಣೆಯಲ್ಲಿ ಈ ಕೆಳಕಂಡಂತೆ ವಿಚಾರಣೆಯಲ್ಲಿರುತ್ತವೆ. ನಿಯಮಾನುಸಾರ ವಿಚಾರಣೆಯನ್ನು ಪೂರ್ಣಗೊಳಿಸಿ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುತ್ತದೆ.

| ಕ್ರ ಸಂ | ದೂರುದಾರರು | ಹೆಚ್.ಎಸ್.ಆರ್. ಲೇಔಟ್ ಪಿಎಸ್‌ಸಿ ನಂ. | ಷರಾ |
|---|---|---|---|
| 01 | ಸುನೀತಾ ರೆಡ್ಡಿ<br><br>1041/C, 11ನೇ ಮುಖ್ಯ ರಸ್ತೆ ಕೋಡಿಹಳ್ಳಿ, ಬೆಂಗಳೂರು | ಹೆಚ್.ಎಸ್.ಆರ್ ಲೇಔಟ್ ಠಾಣಾ ಪಿಟಿಷನ್ ನಂ. 209/2026<br><br>ದಿನಾಂಕ:18-02-2026 | ಸದರಿ ದೂರನ್ನು ಕಲಂ 173 (3) ಬಿಎನ್ ಎಸ್‌ಎಸ್-2023 ಅಡಿಯಲ್ಲಿ ಪ್ರಾಥಮಿಕ ತನಿಖೆಗಾಗಿ ತೆಗೆದುಕೊಳ್ಳಲಾಗಿರುತ್ತದೆ.<br><br>ಸದರಿ ದೂರಿನಲ್ಲಿ ದೂರುದಾರರು 3 ವರ್ಷಕ್ಕೆ URBAN STANDZ PVT LTD ರವರ ಬಳಿ ಆಫೀಸ್ ಲೀಸ್ ಪಡೆದುಕೊಂಡು ಪ್ರಸ್ತುತ ಆಫಿಸ್ ಖಾಲಿ ಮಾಡಿರುತ್ತಾರೆ. ಲೀಸ್‌ಗೆ ನೀಡಿರುವ ಹಣ ನೀಡಿರುವುದಿಲ್ಲ ಸದರಿ ಹಣವನ್ನು ಮರಳಿ ಕೊಡಿಸುವಂತೆ ಕೋರಿ ದೂರು. |

| | | | |
|---|---|---|---|
| 02 | ದೀಪಕ ಎ.ಎನ್.<br><br>ಸಂಖ್ಯೆ-38, 2ನೇ ಮಹಡಿ, 6ನೇ ಕ್ರಾಸ್, ವೈಟ್ ಸಿಟಿ.<br><br>ಸೀಗೆಹಳ್ಳಿ, ಕೆ.ಆರ್ ಪುರಂ ಬೆಂಗಳೂರು | ಹೆಚ್.ಎಸ್.ಆರ್.ಲೇ ಔಟ್ ಠಾಣಾ ಪಿಟಿಷನ್ ನಂ 232/2026<br><br>ದಿನಾಂಕ:24-02-2026 | ಸದರಿ ದೂರನ್ನು ಕಲಂ 173 (3) ಬಿಎನ್ ಎಸ್ಎಸ್-2023 ಅಡಿಯಲ್ಲಿ ಪ್ರಾಥಮಿಕ ತನಿಖೆಗಾಗಿ ತೆಗೆದುಕೊಳ್ಳಲಾಗಿರುತ್ತದೆ.<br><br>ಸದರಿ ದೂರಿನಲ್ಲಿ ದೂರುದಾರರು ಮನೆ ಲೀಸ್ ಮಾಡಿಕೊಳ್ಳಲು URBAN STANDZ PVT LTD ರವರಿಗೆ ಹಣವನ್ನು ನೀಡಿದ್ದು, ಸದರಿ ಹಣವನ್ನು ಮರಳಿ ಕೊಡಿಸುವಂತೆ ಕೋರಿ ದೂರು. |

ಹೆಚ್‌ಡಿ 187 ಎಸ್‌ಎಸ್‌ಟಿ 2026

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು